# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ. ಚನ್ನಪಟ್ಟಣ.

ಉಪಸ್ಥಿತರು: ಶ್ರೀಮತಿ ಉಷಾರಾಣಿ ಬಿ.ಎನ್., ಬಿ.ಎ ಎಲ್‌ಎಲ್.ಬಿ.ಎಲ್.ಎಲ್.ಎಂ,

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**ದಿನಾಂಕ: 9 ನೇ ನವೆಂಬರ್ 2022**

**ಓ.ಎಸ್.ನಂ.258/2016**

ವಾದಿಗಳು : ಶ್ರೀ. ಸಿದ್ದರಾಜೇಗೌಡ

-ವಿರುದ್ಧ-

ಪ್ರತಿವಾದಿಗಳು : ಶ್ರೀಮತಿ ನಾಗರತ್ನ ಮತ್ತು ಇತರರು

ಮಧ್ಯಂತರ ಅರ್ಜಿ ಸಂಖ್ಯೆ:

ವಾದಿಗಳು/ಅರ್ಜಿದಾರರು : ಶ್ರೀ. ಸಿದ್ದರಾಜೇಗೌಡ

-ವಿರುದ್ಧ-

ಪ್ರತಿವಾದಿಗಳು/ಎದುರುದಾರರು : ಶ್ರೀಮತಿ ನಾಗರತ್ನ ಮತ್ತು ಇತರರು

## ಮಧ್ಯಂತರ ಅರ್ಜಿ ಸಂಖ್ಯೆ: ಮೇಲಿನ ಆದೇಶ:

ಮಾನ್ಯ ವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ ವಾದಪತ್ರವನ್ನು ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

2. ವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ.

ವಾದ ಪತ್ರಕ್ಕೆ ಬೇಕಾಗಿರುವ ತಿದ್ದುಪಡಿಗಳ ವಿವರಗಳು

ಪ್ಯಾರಾ 2 ರಲ್ಲಿ 3 ನೇ ಸಾಲಿನಲ್ಲಿ ಸಂತಾನ ಪದದ ನಂತರ "ಇಲ್ಲದ ಕಾರಣದಿಂದ ದೇವೀರಮ್ಮಳಿಗೆ ವೃದ್ದಾಪ್ಯದ ಅಂತ್ಯದಲ್ಲಿ ಪೋಷಣೆಗಾಗಿ ಉತ್ತರಾಧಿಕಾರಿಯಾಗಿ ಕಾನೂನು ಬದ್ದ ವಾರಸುದಾರನಾಗಿ ನಿರ್ವಹಿಸುವ ಮಗನಾಗಿ ವಾದಿಯನ್ನು ಜಯಮ್ಮ - ಸಿದ್ದಯ್ಯರವರು ತೀರ್ಮಾನಿಸಿ ನೀಡಿದ್ದರಿಂದ ಜಯಮ್ಮಳ ಮಗನೆಂದೇಳುವ ಅವಕಾಶ" ಇರುವುದಿಲ್ಲ

ಮತ್ತುಇದೇ ಪ್ಯಾರಾದ 9 ನೇ ಸಾಲಿನಲ್ಲಿ ವ್ಯಕ್ತಿಗಳಾಗಿರುತ್ತಾರೆ. ಪದದ ನಂತರ "ಮತ್ತು ಹೊಸದಾಗಿ 7, 8, 9 ಸೇರ್ಪಡಿಸಿಕೊಂಡು ಪ್ರತಿವಾದಿಗಳನ್ನಾಗಿ ಮಾಡಿರುವ ಹೊರಗಿನ ಇಲಾಖೆಯ ಅಧಿಕಾರಿಗಳಾಗಿರುತ್ತಾರೆ. "

ಪ್ಯಾರಾ 3 ರಲ್ಲಿ 1 ನೇ ಸಾಲಿನಲ್ಲಿ ವಾದಿ ಪದದ ನಂತರ "ತಂದೆ ಸ್ವಯಾರ್ಜಿತವಾಗಿ ಸಂಪಾದಿಸಿದ್ದರಲ್ಲಿ 1 ನೇ ಪತ್ನಿ ದೇವೀರಮ್ಮಳಿಗೂ ವಾದಿಗೂ 1 ನೇ ಒಟ್ಟು ಕುಟುಂಬ ಆಸ್ತಿಯೆಂದು ಬರೆದು ನೀಡಿದ್ದ ಸ್ವತ್ತಾಗಿದ್ದು ಮತ್ತು 2 ನೇ ಪತ್ನಿ ಜಯಮ್ಮಳಿಗೂ" ಪ್ರತಿವಾದಿ 1 ರಿ ಂದ 3 ರವರ "ಗೆಲ್ಲಾ ಎರಡನೇ" ಒಟ್ಟು ಕುಟುಂಬದ "ಆಸ್ತಿಯೆಂದು ಬರೆದು ನೀಡಿದ" ಮತ್ತು 3 ನೇ ಸಾಲಿನಲ್ಲಿ ಸದಸ್ಯರಾಗಿದ್ದು ಪದ ನಂತರ "ದಂತೆ ಬಿಂಬಿಸುತ್ತಿದ್ದು ದಾಖಲೆಗಳನ್ನು ಮರೆಮಾಚಿ" ಮತ್ತು 4 ನೇ ಸಾಲಿನಲ್ಲಿ ಸ್ವಾಧೀನಾನುಭವದಲ್ಲಿ ಪದದ ನಂತರ "ಇರಲಿಲ್ಲ. ಪ್ರತಿವಾದಿಗಳ ತಾಯಿಯೇ" ಮತ್ತು 6 ನೇ ಸಾಲಿನಲ್ಲಿ ವಾದಿ ಪದದ ನಂತರ "ತಾಯಿ ದೇವೀರಮ್ಮಳಿಗೂ ವಾದಿಗೂ ಮತ್ತು ವಾದಿಯ ಉತ್ತರಾಧಿಕಾರಿಯಾಗೂ ನಮೂದಿಸಲ್ಪಟ್ಟಿದ್ದು ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಯಾವುದೇ ರೀತಿಯ" ಮತ್ತು 7 ನೇ ಸಾಲಿನಲ್ಲಿ ಇರು ಪದದ ನಂತರ "ವುದಿಲ್ಲ ನಾಲ್ಕು ಸ್ವತ್ತುಗಳು ವಾದಿಯ ಹಕ್ಕು ಹಿತಾಸಕ್ತಿಗೆ ಒಳಪಡುವುದರಿಂದ ವಾದಿಯ ಪರವಾಗಿ ಆದೇಶ ಮಾಡಬೇಕೆಂದು ಕೋರಲಾಗಿರು" ತ್ತದೆ.

ಪ್ಯಾರಾ 4 ರಲ್ಲಿ 4 ನೇ ಸಾಲಿನಲ್ಲಿ ವಾದಿ ಪದದ ನಂತರ "ತಾಯಿಯಾದ ದೇವೀರಮ್ಮಳಿಗೆ ಒಂದನೇ ಒಟ್ಟು ಕುಟುಂಬವೆಂತಲೂ ಮತ್ತು ಪ್ರತಿವಾದಿಗಳ ತಾಯಿ ಜಯಮ್ಮಳಿಗೆ ಎರಡನೇ ಒಟ್ಟು ಕುಟುಂಬವೆಂತಲೂ ನಿರ್ಣಾಯಿಸಿ ಇಬ್ಬರು ತಾಯಿಂದರ ಮೇಲೆ ಆಸ್ತಿಯ ಸ್ವತ್ತುಗಳನ್ನು ಎರಡು ಕುಟುಂಬಕ್ಕೂ ಯಾವ್ಯಾವ ಸ್ವತ್ತುಗಳೆಂದು ವಿಭಾಗ ಮಾಡಿಕೊಟ್ಟಿ ದ್ದು ಸತ್ಯವನ್ನು ಮರೆ ಮಾಚಿ ತಂದೆ ನೀಡಿದ ಸ್ವತ್ತುಗಳಲ್ಲಿ ನನಗೆ ಮತ್ತು 6 ನೇ ಸಾಲಿನಲ್ಲಿ ಮೂಲಕ ಸ್ವಾಧೀನಾನುಭವದಲ್ಲಿ ಪದ ನಂತರ "ಇರಲಿಲ್ಲ ಬದಲಾಗಿ ಈ ನಾಲ್ಕು ಷೆಡ್ಯೂಲ್
ಸ್ವತ್ತುಗಳು ವಾದಿಗೆ ಸೇರತಕ್ಕದ್ದು ಆಗಿರುತ್ತಾರೆ."

ಮತ್ತು 8 ನೇ ಸಾಲಿನಲ್ಲಿ ಮರಣಾನಂತರ ಪದ ನಂತರ " ದಾಖಲೆಯಿಂದ ಇಬ್ಭಾಗ ಮಾಡಿಕೊಳ್ಳಬೇಕಾಗಿದ್ದ ಸ್ವತ್ತುಗಳನ್ನು ಒಳಷಡ್ಯಂತ್ರದ ಮೋಸದಿಂದ ಎಲ್ಲಾ" ಮತ್ತು 10 ನೇ ಸಾಲಿನಲ್ಲಿ ಜಯಮ್ಮ ಪದ ನಂತರ " ದಿನಾಂಕ 09.02.2004 ರಂದು 4 ನೇ ಪ್ರತಿವಾದಿ

ರೇಷ್ಮೇ ಬಿತ್ತನೆ ಕೋಠಿಯಲ್ಲಿ ಮೊಟ್ಟೆ ಉತ್ಪಾದಿಸುವುದಕ್ಕೆಂದು ರಿಜಿಸ್ಟರ್ ಬೋಗ್ಯ ಮಾಡಿಸಿಕೊಳ್ಳೋಣವೆಂದು ತಿಳಿಸಿ ಎರಡು ಮಂಗಳೂರು ಹೆಂಚಿನ ಮನೆಗಳನ್ನು ಮೋಸದಿಂದ ನೊಂದಾಯಿತ ಕ್ರಯಪತ್ರ ಮಾಡಿಕೊಟ್ಟಿದ್ದು ರಿ. ನಂ. 2723/04-05 ಸಂಪುಟ ಬುಕ್ ನಂ.1 ಪುಟ ಸಂಖ್ಯೆ 235-236 ರ ವಿಸ್ತೀರ್ಣ 14.1/2) (55 ಅಡಿಯುಳ್ಳದು. ಷೆಡ್ಯೂಲ್ ಒಂದನೇಯ ಸ್ವತ್ತನ್ನು ತಾಯಿ ಸತ್ತ ಮೇಲೆ ನಿರ್ಮಾಮ ಮಾಡಿದ್ದು"

ಮತ್ತು 12 ನೇ ಸಾಲಿನಲ್ಲಿ ಕೊಟ್ಟಿದ್ದು ಪದ ನಂತರ "ದರಲ್ಲಿ ನನ್ನ ಮನೆಯ ಪಕ್ಕದಲ್ಲೇ ಇದ್ದುಕೊಂಡು ಸಂಚು ನಡೆಸಿ ಯಾವ ವಿಚಾರದ ಮಾಹಿತಿ ನನಗೆ ನೀಡದೇ ಬೋಗ್ಯಕ್ಕೋ ಬಾಡಿಗೆಗೋ ಇದ್ದೀವಿ ಎಂದು ಎಲ್ಲರೂ ಸೇರಿ ನಾಟಕಗಳನ್ನಾಡಿ ನನ್ನನ್ನು ಕೈಬಿಟ್ಟು ನಾಗರತ್ನಳನ್ನು ಒಂದನೇ ಮಗಳೆಂದು ನಮೂದಿಸಿ ಮೋಸದಿಂದ ನೊಂದಾಯಿತ ಕ್ರಯಪತ್ರ ಮಾಡಿಕೊಟ್ಟಿದ್ದು ರಿ. ನಂ.357/07-08, ಬುಕ್ ನಂ.1 ವಿಸ್ತೀರ್ಣ 17) (28 ಅಡಿ ಮನೆಯಿದ್ದು ಇದಕ್ಕೆ ಲಗತ್ತು ಖಾಲಿ ನಿವೇಶನವಿದು. ಷೆಡ್ಯೂಲ್ ಎರಡನೆಯದು.

ಮತ್ತು 18 ನೇ ಸಾಲಿನಲ್ಲಿ ಕೊಟ್ಟಿದ್ದು ಪದ ನಂತರ "ದರಲ್ಲಿ ಮುಂಚೆಯೇ ಉಪಾಯವನ್ನು ಹೂಡಿದ್ದು ನಮ್ಮ ಕುಟುಂಬದ ದೌರ್ಬಲ್ಯವನ್ನು ಗಮನಿಸಿದ 5 ನೆ ಪ್ರತಿವಾದಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಾನು ಕೆಲಸದಲ್ಲಿದ್ದೀನಿ ನಿಮಗೆ ಬ್ಯಾಂಕಿನಿಂದ ಸಾಲವನ್ನು ಕೊಡಿಸುತ್ತೇನೆ ಎಂದು ನಂಬಿಕೆ ದ್ರೋಹದಿಂದ ಸುಳ್ಳನ್ನು ಹೇಳಿ ಕ್ರಯಕ್ಕೆ ಉತ್ತೇಜಿಸಿ ನೊಂದಾಯಿತ ಕ್ರಯವೆಸಗಿದ್ದಾರೆ ರಿ. ನಂ.712/12-13, ಬುಕ್ ನಂ.1 ವಿಸ್ತೀರ್ಣ 23) (28 ಅಡಿ ಮನೆಯಿದ್ದು ಇದಕ್ಕೆ ಲಗತ್ತು ಖಾಲಿ ನಿವೇಶನವಿರುವ ಸ್ವತ್ತಾಗಿದ್ದು.

ಮತ್ತು 19 ನೇ ಸಾಲಿನಲ್ಲಿ ದಿನಾಂಕ ಪದ ನಂತರ "13.02.2000 ರಂದು ನೊಂದಣಿಯಿಲ್ಲದ ದಾನಪತ್ರವನ್ನು ಬರೆದು ನೀಡಿದ್ದು ಮತ್ತು ಇದೇ ಸ್ವತ್ತನ್ನು ಜಯಮ್ಮಳು ಹೇಮಾವತಿಗೆ ದಿಃ 31.10.2000 ರಂದು ಮರಣ ಶಾಸನ ಪತ್ರವನ್ನು ಬರೆದು ನೀಡಿದ ಪತ್ರವನ್ನು ಈ ದಿನದವರೆಗೂ ರದ್ದು ಮಾಡಿರುವುದಿಲ್ಲ ಮತ್ತು ಇದೇ ಸ್ವತ್ತನ್ನು ದಿ ಃ 02.04.2001 ರಂದು ಜಯಮ್ಮಳು ಹೇಮಾವತಿಗೆ ಒಪ್ಪಿಗೆ ಪತ್ರದಿಂದ ನೀಡಿದ ಪತ್ರದಿಂದ ದಿ ಃ 19.06.2001 ಇದೇ ಸ್ವತ್ತನ್ನು ಜಯಮ್ಮಳು ಹೇಮಾವತಿಗೆ ಒಪ್ಪಿಗೆ ಪತ್ರ ಆಧಾರದ ಮೇಲೆ ಪುರಸಭೆಯಲ್ಲಿ ಕೆ ಬಸವರಾಜು ಸದಸ್ಯನ ಶಿಫಾರಸ್ಸಿನಿಂದ ಖಾತೆ ಮಾಡಿಸಿರುತ್ತಾಳೆ.

ಇದೇ ಸ್ವತ್ತಿಗೆ ದಿಃ 19.07.2001 ರಲ್ಲಿ ಇದೇ ಸ್ವತ್ತಿನಲ್ಲಿ ಮೊದಲೇ ಹೋಟೆಲ್ ಷೆಡ್ಡು ಮನೆ ಇದ್ದರು ನಂತರ ಈ ಸ್ವತ್ತಿನಲ್ಲಿ ಹಿಂಭಾಗಕ್ಕೆ ಜಯಮ್ಮಳು ಹೇಮಾವತಿ ಹೆಸರಿನಲ್ಲಿ ರಿಜಿಸ್ಟರ್ ನಂ. 973 ಸಂಪುಟ 3329 ಪುಟ 145-147 ಪುರಸಭೆಯಿಂದ 25,000/-ರೂ ಶಿಫಾರಸ್ಸಿನಿಂದ ಸಾಲವನ್ನು ಪಡೆದು ಷೀಟ್ ಮನೆಯನ್ನು ಕಟ್ಟಿ ಸ್ವಾಧೀನ ಅನುಭವದಲ್ಲಿದ್ದು ಈ ಮನೆಯ ಆದಾಯದ ಹಣವನ್ನು ಜಯಮ್ಮಳೇ ಪಡೆಯುತ್ತಿರುತ್ತಾಳೆ. ಈ ಸ್ವತ್ತು ಉಳಿದ ಸ್ವತ್ತುಗಳೆಲ್ಲ ಅಡಮಾನದಿಂದ ದಿ ಃ 23.11.2004 ರಂದು ಜಯಮ್ಮಳು ಮಕ್ಕಳ ಸಹಿ ಇಲ್ಲದೆನೇ ಕಲ್ಪತರು ಗ್ರಾಮೀಣ ಬ್ಯಾಂಕ್ ನಲ್ಲಿ 1 ಲಕ್ಷ ಸಾಲವನ್ನು ಪಡೆದಿರುತ್ತಾಳೆ. ಇದೇ ಸ್ವತ್ತಿಗೆ ದಿಃ 09.07.2010 ರಂದು ಷೀಟ್ ಮನೆಗೆ ಶ್ರೀನಿವಾಸನು ಜಯಮ್ಮಳಿಂದ ಬೋಗ್ಯಕ್ಕೆ ಪಡೆದು 1,10,000 ರೂ ಹಣ ಜಯಮ್ಮಳಿಗೆ ನೀಡಿ ವಾಸವಿದ್ದ ನಾಲ್ಕು ತಿಂಗಳುಗಳಲ್ಲಿ "

ಮತ್ತು 20 ನೇ ಸಾಲಿನಲ್ಲಿ ಕೊಟ್ಟಿದ್ದು ಪದ ನಂತರ "ದರಲ್ಲಿ ಮೋಸವಿದ್ದು, ರಿ. ನಂ. 2874/10-11 ಬುಕ್ ನಂ.1 ವಿಸ್ತೀರ್ಣ 17) (19 ಅಡಿ ಮನೆಯಿದ್ದು ಇದಕ್ಕೆ ಲಗತ್ತು ಹೋಟೆಲ್ ಷೆಡ್ಡು ಮನೆಯಿದ್ದ ಸ್ವತ್ತಾಗಿದ್ದು. "

ಮತ್ತು 21 ನೇ ಸಾಲಿನಲ್ಲಿ ಬಾದಕವಾಗುವುದಿಲ್ಲ ಪದ ನಂತರ "ಇದೇ ಸ್ವತ್ತಿಗಾಗಿ ದಿಃ 30.10.2013 ರಂದು ಬೋಗ್ಯದಲ್ಲಿದ್ದ ಮನೆಗೆ ಶ್ರೀನಿವಾಸನು ವಾದಿಯಿಂದ ಮನೆಯನ್ನು ಖಾಲಿ ಮಾಡುತ್ತೇನೆಂದು ಸಬೂಬು ಹೇಳಿ 1,10,000/-ರೂ ಹಿಂಪಡೆದು ಬೋಗ್ಯದ ಬಿಡುಗಡೆ ಪತ್ರವನ್ನು ಬರೆದು ಕೊಟ್ಟಿರುತ್ತಾನೆ. ಜಯಮ್ಮನವರು ದಿಃ 27.02.2014 ರಂದು ಸತ್ತ ನಂತರ ಶ್ರೀನಿವಾಸನು 30.11.2010 ರಲ್ಲಿ ಪಡೆದ ಕ್ರಯಪತ್ರಕ್ಕೆ ನನ್ನ ತಂಗಿ ನಾಗರತ್ನಳ ಬಳಿಗೆ ಹೋಗಿ ಸಹಿ ಕೇಳಿದ್ದಾನೆ ಆಗ ನಾಗರತ್ನಳು ನಮ್ಮಣ್ಣ ನ ಹತ್ತಿರ ಸಹಿ ಮಾಡಿಸಿಕೊಂಡು ಬಾ ಆ ಮೇಲೆ ನಾನು ಹಾಕುತ್ತೀನಿ ಎಂದು ಹೇಳಿ ಕಳುಹಿಸಿದ್ದಾಳೆ. ವಾದಿಗೆ ನನ್ನ ಬಳಿ ಬಂದು ಎರಡು ಕೆ ಜಿ ಮಾಂಸ ನೀಡಿದ್ದ 15 ದಿನ ಚೆನ್ನಾಗಿ ತಿನ್ನಿಸಿದ್ದ ಪುಸಲಾಯಿಸಿ 15 ದಿನ ಅವನ ಮನೆಯಲ್ಲೇ ತಂಗಿಸಿಕೊಂಡನು. ಮೆತ್ತಗೆ ನನ್ನ ಹತ್ತಿರ ನಿನ್ನ ಸಹಿ ಬೇಕೆಂದು ಕೇಳಿದಾಗ ವಾದಿಯು ನಿನಗೆ ಯಾಕೆ ಸಹಿ ಮಾಡಿ ಕೊಡಬೇಕು ಎಂದು ಜಗಳವಾಡಿದ ಮೇಲೆ ಎದ್ದು ಮನೆಯಿಂದ ಹೊರಹಾಕಿದ್ದನು. ಇದೇ ಸ್ವತ್ತಿಗೆಂದು ಕಲ್ಪತರು ಗ್ರಾಮೀಣ ಬ್ಯಾ ಂಕಿನಿಂದ ದಿಃ 20.09.2014 ರ ಂದು ಶ್ರೀನಿವಾಸನು ಆರು ಲಕ್ಷ ಸಾಲವಾಗಿ ಪಡೆದು (ಸಾಲದ ಖಾತೆ ನಂ 85023314850) ರಿಜಿಸ್ಟರ್ ನಂ 3377 ಮಾಡಿಕೊಟ್ಟು ಇಪ್ಪತ್ತು ರೂಪಾಯಿ ಇ - ಸ್ಟಾಂಪಿಂಗ್ ಪೇಪರ್ ನಲ್ಲಿ ವಾದಿಯ ಮತ್ತು 1 ನೇ ಪ್ರತಿವಾದಿಯ

ಸಹಿಯನ್ನು ಫೋರ್ಜರಿ ಮಾಡಿ ಹಣವನ್ನು ಪಡೆದಿರುತ್ತಾನೆ. ಸದರಿ ಕ್ರಯ ದಾನ , ಮರಣ ಶಾಸನ, ಒಪ್ಪಿಗೆ ಪತ್ರವು ವಾದಿಯ ಹಕ್ಕಿಗೆ ಬಾದಕವಾಗಿರುವುದಿಲ್ಲ. ಈ ದಾಖಲೆಯನ್ನು ಬ್ಯಾಂಕಿನಿಂದ ಹಾಜರುಪಡಿಸಲು ಆದೇಶಕ್ಕೆ ಕೋರಿರುತ್ತೇನೆ."

ಮತ್ತು 30 ನೇ ಸಾಲಿನಲ್ಲಿ ಈ ಕಾರಣದಿಂದ ಪದ ನಂತರ "ವಾದಿಯ ತಂದೆ ಮೊದಲನೇ ಪತ್ನಿ ದೇವೀರಮ್ಮಳಿಗೂ ವಾದಿಗೂ ವಿಭಾಗಿಸಿ ಹಸ್ತಾಂತರಿಸತಕ್ಕದ್ದೆಂದು ನೀಡಿದ ನಾಲ್ಕು ಷೆಡ್ಯೂಲ್ ಸ್ವತ್ತುಗಳನ್ನು ಒಂದನೇ ಒಟ್ಟು ಕುಟುಂಬದ ಆಸ್ತಿಗಳೆಂದು ನಿರ್ಣಾಯಿಸಿದ್ದ ಸ್ವತ್ತುಗಳನ್ನೆಲ್ಲಾ ಪ್ರತ್ಯೇಕ ಸ್ವಾಧೀನ ಕೋರಿ ದಾವೆಯನ್ನು ಹೂಡಲಾಗಿರುತ್ತದೆ.

ಪ್ಯಾರಾ 5 ರಲ್ಲಿ 5 ನೇ ಸಾಲಿನಲ್ಲಿ ಒಳಪಟ್ಟಿದ್ದು ಪದ ನಂತರ " ಮತ್ತು ವಾರ್ಡ್ ನಂ 6 ಕ್ಕೂ ಒಳಪಟ್ಟಿದ್ದು " ಈ ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

ಪ್ಯಾರಾ 7 ರಲ್ಲಿ 4 ನೇ ಸಾಲಿನಲ್ಲಿ ವಿರುದ್ಧ ಪದ ನಂತರ " ವಾಗಿ ಯಾವುದೇ ಭಾಗಾಂಶದ ತೀರ್ಪು ಮತ್ತು ಡಿಕ್ರಿ ಆದೇಶ ಮಾಡಬಾರದೆಂದು ಕೋರಿದ್ದು ವಾದಿಗೆ ತಂದೆ ನೀಡಿದ ನಾಲ್ಕು ಷೆಡ್ಯೂಲ್ ಸ್ವತ್ತುಗಳನ್ನು ವಾದಿಯ ಪರವಾಗಿ " ಈ ಕೆಳಕಂಡಂತೆ ತೀರ್ಪು ಮತ್ತು ಡಿಕ್ರಿ ನೀಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ.

ಪ್ಯಾರಾ 7 ರಲ್ಲಿ 1 ನೇ ಖಂಡಿಕೆಯ 1 ನೇ ಸಾಲಿನಲ್ಲಿ ಭಾಗ ಪದ ನಂತರ " ವಲ್ಲ ನಾಲ್ಕು ಷೆಡ್ಯೂಲ್ ಸ್ವತ್ತುಗಳೆಲ್ಲ" ಮತ್ತು 2 ನೇ ಸಾಲಿನಲ್ಲಿ ಪದ ನಂತರ ಒಂದನೇ ಒಟ್ಟು ಕುಟುಂಬದ ಮತ್ತು 3 ನೇ ಸಾಲಿನಲ್ಲಿ ಬಂದ ಪದ ನಂತರ "ನಾಲ್ಕು ಷೆಡ್ಯೂಲ್" ಮ ತ್ತು 4 ನೇ ಸಾಲಿನಲ್ಲಿ ಗುರ್ತಿಸಿಕೊಡಬೇಕೆಂದು ಪದ ನಂತರ "ಮತ್ತು ಸದರಿ ಸ್ವತ್ತುಗಳು ವಾದಿಗೆ ಸೇರತಕ್ಕದ್ದಾಗಿದ್ದು ಈ ಸ್ವತ್ತನ್ನು ಪ್ರತಿವಾದಿಗಳಾದ 4, 5, 6 ರವರ ಕ್ರಯಪತ್ರವನ್ನು ಆಸಿಂಧುವೆಂದು ಆದೇಶಗೊಳಿಸಿಕೊಡಬೇಕೆಂದು ಹಾಗೂ ಒಂದನೇ ಒಟ್ಟು ಕುಟುಂಬದ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ವಾದಿಯ ಪರವಾಗಿ ಆದೇಶಿಸಬೇಕೆಂದು ಕೋರಲಾಗಿದ್ದು "

ಪ್ಯಾರಾ 7 ರಲ್ಲಿ 2 ನೇ ಖಂಡಿಕೆಯ 1 ನೇ ಸಾಲಿನಲ್ಲಿ ಭಾಗ ಪದ ನಂತರ " ವಲ್ಲ ನಾಲ್ಕು ಷೆಡ್ಯೂಲ್ ಸ್ವತ್ತುಗಳೆಲ್ಲ" ವನ್ನು ಮತ್ತು 2 ನೇ ಸಾಲಿನಲ್ಲಿ ಬೌಂಡರಿಗನುಗುಣವಾಗಿ ಪದ ನಂತರ ದಾವಾದ ನಾಲ್ಕು ಷೆಡ್ಯೂಲ್ ಸ್ವತ್ತುಗಳನ್ನು ಪ್ರತ್ಯೇಕ ಸ್ವಾಧೀನ ಕೊಡಿಸಿಕೊಡಬೇಕೆಂತಲೂ ಕೋರಿದ್ದು ಮತ್ತು ಪ್ರತಿವಾದಿಗಳು ಕ್ರಿಮಿನಲ್ ಬುದ್ಧಿ

ಉಪಯೋಗಿಸಿ ಮೋಸದಿಂದ ಐ ಪಿ ಸಿ ಸೆಕ್ಷನ್ 407, 417, 420, 468 ಕಲಂಗಳಿಂದ ಕ್ರಯಕ್ಕೆ ಪಡೆದಿದ್ದು ಸ್ಪಷ್ಟವಾಗಿರುವುದರಿಂದ ಕಾನೂನು ರೀತ್ಯಾ ಕ್ರಮದಿಂದ ದಾವೆ ನಡೆಸಿ ಅಕ್ರಮದ ಕ್ರಯಪತ್ರಗಳನ್ನು ರದ್ದು ಗೊಳಿಸಿದ ಸ್ವತ್ತುಗಳನ್ನು ಘನ ನ್ಯಾಯಾಲಯವು ಜಪ್ತಿ ಮಾಡಿಕೊಂಡ ಮನೆಗಳನ್ನು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಮತ್ತು ನಿರ್ನಾಮ ಮಾಡಿರುವ ಮಂಗಳೂರು ಹೆಂಚಿನ ಮನೆಗಳನ್ನು ಪುನಃ ನಿರ್ಮಿಸಿ ಕೊಡಬೇಕೆಂದು ಇಲ್ಲದಿದ್ದರೆ ದಂಡವನ್ನು ಕಟ್ಟಿಸಿಕೊಂಡು ಮತ್ತು ಪೊ ಲೀಸ್ ಇಲಾಖೆಯ ಅಧಿಕಾರಿಯಿಂದ ಪ್ರತಿವಾದಿಗಳನ್ನು ಮನೆಗಳಿಂದ ಉಚ್ಚಾಟನೆ ಮಾಡಿಸಿ ನನ್ನ ಸ್ವಾಧೀನಕ್ಕೆ ನೀಡಬೇಕೆಂದು ಕೋರಿರುತ್ತೇನೆ"

ಪ್ಯಾರಾ 7 ರಲ್ಲಿ 3 ನೇಯ ಖಂಡಿಕೆಯ 1 ನೇ ಸಾಲಿನಲ್ಲಿ ದಿನಾಂಕ ಪದ ನಂತರ " 09.02.2004" ಮತ್ತು 2 ನೇ ಸಾಲಿನಲ್ಲಿ ರಂದು ಪದ ನಂತರ "ಮತ್ತು ದಿನಾಂಕ 13.02.2000 ರಂದು ಮಾಡಿದ ನೊಂದಣಿಯಿಲ್ಲದ ದಾನಪತ್ರ ಮತ್ತು ತಾಯಿ ಮಾಡಿದ ದಿನಾಂಕ 31.10.2000 ರಂದು ಮಾಡಿದ ನೊಂದಣಿ ವಿಲ್ ಪತ್ರ ಮತ್ತು ಒಪ್ಪಿಗೆ ಪತ್ರವು ದಿಃ 02.04.2001" ಮತ್ತು 3 ನೇ ಸಾಲಿನಲ್ಲಿ ಬಾದಕವಾಗುವುದಿಲ್ಲವೆಂದು ಪದ ನಂತರ ಮತ್ತು ಪಕ್ಷಗಾರರಾಗಿರುವುದಿಲ್ಲ ಎಂದು ತಿಳಿದು ಈ ದಾಖಲೆ ಪತ್ರಗಳನ್ನು ಆಸಿಂಧುವನ್ನಾಗಿ ಆದೇಶಿಸಬೇಕೆಂದು ಕೋರಲಾಗಿದ್ದು ಹಾಗೂ ಸದರಿ ದಾವಾ ಸ್ವತ್ತುಗಳ ಬಗ್ಗೆ ಹಿರಿಯ ಸಬ್ ರಿಜಿಸ್ಟರ್ ಅಧಿಕಾರಿ ಚನ್ನಪಟ್ಟಣದವರಿಗೂ ಮತ್ತು ನಗರಸಭೆಯ ಪೌರಾಯುಕ್ತ ಚನ್ನಪಟ್ಟಣದವರಿಗೂ ಮತ್ತು ಕರ್ನಾಟಕ ಗ್ರಾಮೀಣ ಬ್ಯಾಂಕ್ ರಿಜನಲ್ ಮ್ಯಾನೇಜರ್ ರವರಿಗೂ ಕೋರ್ಟಿಗೆ ಹಾಜರಾಗುವಂತೆ ನೊಟೀಸ್ ನೀಡಿ ವಿಚಾರಣೆಗೆ ಒಳಪಡಿಸಿ ಖಾತೆ ಖಿರ್ಧಿಯಲ್ಲಿ ನಮೂದಿಸಿರುವ ಹೆಸರುಗಳನ್ನು ಮುದ್ದಾಂ ರದ್ದುಗೊಳಿಸಿ ಎಂದು ಆದೇಶಿಸಬೇಕೆಂದು ಮತ್ತು ಅದನ್ನು ಪರಿಶೀಲಿಸಲು ಅದರ ವಹಿಗಳನ್ನು ಖುದ್ದು ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ಆದೇಶಿಸಬೇಕೆಂದು ಕೋರುತ್ತಿದ್ದು

ಪ್ಯಾರಾ 7 ರಲ್ಲಿ 4 ನೇ ಯ ಖಂಡಿಕೆಯ 4 ನೇ ಸಾಲಿನಲ್ಲಿ ಕೊಳ್ಳುತ್ತಾರೆ. ಪದ ನಂತರ "ಹಾಗೂ 6 ನೇ ಪ್ರತಿವಾದಿ ಶ್ರೀನಿವಾಸನು ಮೋಸದಿಂದ ಕ್ರಯ ಮಾಡಿಸಿಕೊಂಡು ಸ್ವತ್ತಿಗೆ ನಾನು ಬೋಗ್ಯಕ್ಕೆ ವಾಸವಿದ್ದನೆಂದು ಸುಳ್ಳು ಹೇಳಿ ನನ್ನಿಂದ ಬೋಗ್ಯದ ಹಣವನ್ನು ವಾಪಸ್ಸು ಪಡೆದಿರುವುದಕ್ಕೆ ಪುನಃ ಹಣ ವಾಪಸ್ಸು ಮಾಡಬೇಕೆಂದು ಮತ್ತು ಬಾಡಿಗೆ ಹಣವನ್ನು ನೀಡಬೇಕೆಂದು ಮತ್ತು ಬ್ಯಾಂಕಿಗೆ ನನ್ನ ಸಹಿಯನ್ನು ಫೋರ್ಜರಿ ಮಾಡಿ ಆರು ಲಕ್ಷ ಪಡೆದಿರುವ ಹಣವನ್ನು ವಾಪಸ್ಸು ನೀಡಬೇಕೆಂದು ಮತ್ತು ದಂಡವನ್ನು ಹಾಕಬೇಕೆಂದು ಮತ್ತು ಶಿಕ್ಷೆಯನ್ನು

ನೀಡಬೇಕೆಂದು ಮತ್ತು 4 ನೇ ಪ್ರತಿವಾದಿ ಹೆಚ್ ಎಲ್ ನಾಗರಾಜು ಕೂಡಾ 09.02.2004 ರ ಕ್ರಯಕ್ಕೆ ಪಡೆದ ಮಂಗಳೂರು ಹೆಂಚಿನ ಮನೆಯನ್ನು ತಾಯಿ ಸತ್ತ ಮೇಲೆ ನಿರ್ನಾಮ ಮಾಡಿದ್ದಕ್ಕೆ ಇವನಿಂದಲೂ ಬಾಡಿಗೆ ಹಣವನ್ನು ವಸೂಲಿ ಮಾಡಬೇಕೆಂದು ಮತ್ತು ದಂಡವನ್ನು ಮತ್ತು ಯಾವಾಗ ಭೋಗ್ಯಕ್ಕೆ ಬಂದ ವೇಳೆಯಿಂದಲೂ ಬಾಡಿಗೆ ಹಣವನ್ನು ನೀಡಬೇಕೆಂತಲೂ ಮತ್ತು ಶಿಕ್ಷೆಗೆ ಗುರಿಪಡಿಸಬೇಕೆಂದು ಕೋರಲಾಗಿದ್ದು ಮತ್ತು ಇತರೆ ಪರಿಹಾರಗಳನ್ನು ಕೊಡಿಸಿ ಕೊಡಬೇಕೆಂತಲೂ ಪ್ರಾರ್ಥಿಸಿರುತ್ತಾರೆ."

ಷೆಡ್ಯೂಲ್ ಸ್ವತ್ತುಗಳ ವಿವರದಲ್ಲಿ ಭಾಗ **1** ನೆಯದಾಗಿ ಸೇರ್ಪಡಿಸಿ ನಮೂದಿಸಿದೆ

ಹೆಚ್ ಎಲ್ ನಾಗರಾಜು ರೇಷ್ಮೆ ಬಿತ್ತನೆ ಕೋಠಿ ಮಾಡುವುದಕ್ಕೆಂದು ಭೋಗ್ಯಕ್ಕೆಂದು ಪಡೆದು ಭೋಗ್ಯದ ರಿಜಿಸ್ಟರ್ ಮಾಡುವುದರ ಬದಲು ಒಳಷಡ್ಯಂತ್ರದ ಮೋಸವಂಚನೆಯಿಂದ ದಿಃ 09.02.2004 ರಲ್ಲಿ ನೊಂದಣಿ ನಂಃ 2723/04-05 ಎಂದು ಕ್ರಯವೆಸಗಿದ್ದಾರೆ.

ಚನ್ನಪಟ್ಟಣ ಟೌನ್ ವಾರ್ಡ್ ನಂ 6 ರಲ್ಲಿ ಎ ಡಿವಿಜನ್ ಆವರ್ತಪುರದಲ್ಲಿರುವ ಚರ್ಚ್ ರಸ್ತೆಯಲ್ಲಿರುವ ಮುನಿಸಿಪಲ್ ಖಾತಾ ನಂ 4601, ಮುನಿಸಿಪಲ್ ಡೋರ್ ನಂ 2240/17 ಎ ಬಿ ಸಿ ದಾಖಲಾದ ವಿಸ್ತೀರ್ಣ 60) (55 ಅಡಿ ಪೈಕಿಯಲ್ಲಿ 14.1/2 ಹದಿನಾಲ್ಕುವರೆ ಅಡಿ) (ಉತ್ತರ ದಕ್ಷಿಣ 55 ಅಡಿಗಳು ಎರಡು ಮಂಗಳೂರು ಹೆಂಚಿನ ಮನೆಗಳಿಗೆ

ಚೆಕ್ಕುಬಂದಿ ಪೂರ್ವಕ್ಕೆ ಃ ಹೆಚ್ ಎಲ್ ನಾಗರಾಜು ಸ್ವಂತ ಮನೆ
ಪಶ್ಚಿಮಕ್ಕೆ ಃ ನಮ್ಮದೇ ಸ್ವತ್ತು
ಉತ್ತರಕ್ಕೆ ಃ ಸಬ್ ರಸ್ತೆ
ದಕ್ಷಿಣಕ್ಕೆ ಃ ಕನ್ಸರ್ ವೆನ್ಸಿ ಗಲ್ಲಿ

3. ವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ವಾದಿಯು ತಂದೆಯ ಒಟ್ಟು ಕುಟುಂಬದ ಆಸ್ತಿಯನ್ನು ಒಂದನೇ ನಾಲ್ಕು ಭಾಗವನ್ನು ಕೋರಿ ಭಾಗ ಕೇಳಿದ್ದು ನಿಜ, ಆದರೆ ದಾಖಲೆಗಳನ್ನು ಹುಡುಕುತ್ತಾ ಹೋದಂತೆಲ್ಲಾ ಸತ್ಯದ ವಿಚಾರವು ದಾಖಲೆ ಸಮೇತ ತಿಳಿಯಿತ್ತು. ಈಗ ವಾದಪತ್ರದ ತಿದ್ದುಪಡಿಯ ಅವಶ್ಯಕತೆಯಿದ್ದು ಕೆಳಗಿನಂತೆ ಸದರಿ ನಾಲ್ಕು ಷೆಡ್ಯೂಲ್ ಸ್ವತ್ತುಗಳನ್ನು ಚೆಕ್ಕುಬಂದಿಗಳನ್ನು ಸೇರಿದಂತೆ ಪ್ರತ್ಯೇಕವಾಗಿ ಸಿದ್ದಯ್ಯನವರು ಬದುಕಿದಾಗಲೇ ದೇವೀರಮ್ಮಳಿಗೆ ಸಿದ್ದರಾಜೇಗೌಡನಿಗೂ ಬರೆದು ನೀಡಿದ್ದು ತಂದೆ ಸತ್ತ ನಂತರ ವರ್ಗಾಯಿಸಿಕೊಂಡು ಸ್ವಾಧೀನಾನುಭವದಲ್ಲಿರತಕ್ಕದ್ದು ಆಗಿದ್ದು ಈ ಸತ್ಯವನ್ನು

ವಾದಿಗೆ ಮರೆ ಮಾಚಿ ಜಯಮ್ಮನವರು ಮತ್ತು ಪ್ರತಿವಾದಿ ಮಕ್ಕಳುಗಳು ದಿಃ 09.02.2004, 17.05.2007, 20.06.2011 ಮತ್ತು 05.05.2012, 30.11.2020 ರಂದು ಮಾಡಿರುವ ಕ್ರಯಪತ್ರ, ದಾನಪತ್ರ, ಮತ್ತು 02.04.2001 ರಂದು ಒಪ್ಪಿಗೆ ಪತ್ರ ಮಾಡಿದ್ದು ಮತ್ತು ದಿಃ 31.10.2000 ರಂದು ನೊಂದಣಿ ಮರಣ ಶಾಸನ ಪತ್ರ ಮತ್ತು 13.02.2000 ರಂದು ನೊಂದಣಿಯಿಲ್ಲದ ದಾನಪತ್ರಗಳ ಮೂಲಕ ನನ್ನ 2 ನೇ ತಂಗಿಯಾದ ಹೇಮಾವತಿಗೂ ಮತ್ತು 4 ರಿಂದ 6 ನೇ ಪ್ರತಿವಾದಿಗಳಿಗೆ ಪರಭಾರೆ ಮಾಡಿರುವ ಕ್ರಯಪತ್ರಗಳು ವಾದಿಯ ಹಕ್ಕಿಗೆ ಬಾಧಕವಾಗುವುದಿಲ್ಲ ಮತ್ತು 6 ನೇ ಪ್ರತಿವಾದಿಯು ನನ್ನ ಸಹಿಯನ್ನು ಫೋರ್ಜರಿ ಮಾಡಿ ಕರ್ನಾಟಕ ಗ್ರಾಮೀಣ ಬ್ಯಾಂಕಿನಿಂದ ಆರು ಲಕ್ಷ ಹಣವನ್ನು ಮೋಸದಿಂದ ಪಡೆದಿದ್ದಾನೆ ಮತ್ತು 5 ನೇ ಪ್ರತಿವಾದಿಯು ನಾನು ಬ್ಯಾಂಕಿನಿಂದ ಸಾಲವನ್ನು ಕೊಡಿಸುತ್ತೇನೆಂದು ಸಂಚನ್ನು ಹೂಡಿ ಕ್ರಯವೆಸಗಿದ್ದಕ್ಕೆ ವಾದಿಯು ಪಕ್ಷಗಾರರಾಗಿರುವುದಿಲ್ಲ ಮತ್ತು 4 ನೇ ಪ್ರತಿವಾದಿಯು ರೇಷ್ಮೆ ಬಿತ್ತನೆ ಕೋಠಿ ಉತ್ಪಾದಿಸುವುದಕ್ಕೆ ಬೋಗ್ಯಕ್ಕೆಂದು ಬಂದು ಮೋಸದಿಂದ ಕ್ರಯ ಮಾಡಿಸಿಕೊಂಡಿದ್ದಾನ ಎಂದು ಈ ನ್ಯಾಯಾಲಯದ ನಿರ್ದೇಶನ ಕೋರಿ ದಾವೆಯನ್ನು ಸಲ್ಲಿಸಿದ್ದು ವಾದಪತ್ರದ ಕಣ್ಣು ತಪ್ಪಿನಿಂದ ಹಾಗೂ ಮಾಹಿತಿ ಕೊರತೆಯಿಂದ ಕೆಲವು ಮುಖ್ಯ ಅಂಶಗಳನ್ನು ಕೈ ಬಿಟ್ಟಿದ್ದು ಈ ಎಲ್ಲಾ ಅಂಶಗಳನ್ನು ಈ ಕೆಳಗಿನಂತೆ ವಾದಪತ್ರದ ವಿವರಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಕಂಡು ಬಂದಿದ್ದು ಈ ಅರ್ಜಿಯಲ್ಲಿ ಹೇಳಿರುವಂತೆ ತಿದ್ದುಪಡಿ ಮಾಡದೇ ಹೋದ ಪಕ್ಷದಲ್ಲಿ ಕ್ರಯದಾರರು ಬೇರೆಯವರಿಗೆ ಮಾರಾಟ ಮಾಡುವ ಸಂಭವವಿರುತ್ತದೆ. ಆ ಕಾರಣದಿಂದಲೂ ವಾದಪತ್ರದ ತಿದ್ದುಪಡಿ ಅವಶ್ಯಕವಾಗಿರುತ್ತದೆ. ಸದರಿ ತಿದ್ದುಪಡಿ ಮಾಡದಿದ್ದರೆ ದಾವಾದ ಸ್ವಾಭಾವಿಕತೆ ಮತ್ತು ವ್ಯಾಜ್ಯ ಕಾರಣ ಬದಲಾಗುವುದಿಲ್ಲ. ವಾದಿಯ ಪ್ರಕರಣದ ವಿವರಗಳನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಲು ಮತ್ತು ವಾದಿಯ ಪರ ದಾವೆಯನ್ನು ನ್ಯಾಯಾಲಯದ ಮುಂದೆ ಸಾಬೀತು ಪಡಿಸಲು ನ್ಯಾಯ ನಿರ್ಣಯದ ಹಿತದೃಷ್ಟಿಯಿಂದ ತಿದ್ದು ಪಡಿ ಮಾಡುವ ಅವಶ್ಯಕತೆ ಕಂಡು ಬಂದಿರುತ್ತದೆ. ಈ ದಾವೆ ಅರ್ಜಿಯನ್ನು ವಾದಿಯ ಪರವಾಗಿ ಇತ್ಯರ್ಥಪಡಿಸಿ ಆದೇಶ ನೀಡುವುದರಿಂದ ಪ್ರತಿವಾದಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಈ ಅರ್ಜಿಯನ್ನು ತಿರಸ್ಕರಿಸಿದಲ್ಲಿ ವಾದಿಗೆ ತುಂಬಲಾರದ ಕಷ್ಟನಷ್ಟವಾಗುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ವಾದ ಪತ್ರವನ್ನು ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

4. ಮಾನ್ಯ ಪ್ರತಿವಾದಿಗಳ ಪರ ವಕೀಲರು ಈ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ, ವಾದಿಯರು ಸಲ್ಲಿಸಿದ ಅರ್ಜಿಯು ಕಾನೂನು ಪ್ರಕಾರ

ಊರ್ಜಿತವಾಗಿರುವುದಿಲ್ಲವೆಂದು, ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಮುಂದುವರೆದು ವಾದಿಯು ಸಲ್ಲಿಸಿರುವ ವಾದಪತ್ರಕ್ಕೆ ಲಿಖಿತ ತಕರಾರನ್ನು ಸಲ್ಲಿಸಿದ್ದು, ತದನಂತರ ಹಂತ ಹಂತವಾಗಿ ದಾವೆಯನ್ನು ಮುಂದೂಡಿ ವಿವಾದಾಂಶಗಳು ಜರುಗಿ ವಾದಿಯ ವಿಚಾರಣೆಗೆಂದು ದಿಃ 03.01.2018 ಕ್ಕೆ ಮುಂದೂಡಲ್ಪಟ್ಟಿರುತ್ತದೆ. ನಂತರ ವಾದಿಯು ದಿ ಃ 05.04.2018 ರಲ್ಲಿ ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಸದರಿ ದಿನದಂದೇ ವಾದಿಯ ಮುಂದುವರೆದ ವಿಚಾರಣೆಗೆಂದು ದಿನಾಂಕವನ್ನು ಪಡೆದು ಮುಂದುವರಿದ ವಿಚಾರಣೆಯನ್ನು ನಡೆಸಿರುವುದಿಲ್ಲ. ತದನಂತರ ವಾದಿಯ ಮುಂದುವರೆದ ವಿಚಾರಣೆ ಇಲ್ಲವೆಂದು ಪರಿಗಣಿಸಿ ವಾದಿಯ ಪಾಟಿ ಸವಾಲಿಗೆಂದು ಮುಂದೂಡಲ್ಪಟ್ಟಿರುತ್ತದೆ. ನಂತರ ವಾದಿಯು ನ್ಯಾಯಾಲಯಕ್ಕೆ ಹಲವು ಬಾರಿ ಗೈರುಹಾಜರಾಗಿ ದಿ ಃ 15.10.2019 ರಂದು ಆದೇಶ 1 ನಿಯಮ 10 ರಡಿಯಲ್ಲಿ ಹೆಚ್ಚುವರಿ ಪ್ರತಿವಾದಿಗಳನ್ನಾಗಿ ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ಪುರಸ್ಕೃತಗೊಂಡ ನಂತರ ವಾದಿಯು ಆದೇಶ 6 ನಿಯಮ 17 ರ ಮದ್ಯಕಾಲೀನ ಅರ್ಜಿಯನ್ನು ಈ ಪ್ರತಿವಾದಿಯ ವಿರುದ್ಧ ಉದ್ದೇಶಪೂರಕವಾಗಿ ಸಲ್ಲಿಸಿರುತ್ತಾರೆ. ವಾದಿಯು ನ್ಯಾಯಾಲಯದ ಆದೇಶದಂತೆ ನಡೆದುಕೊಳ್ಳದೇ ಒಂದಲ್ಲಾ ಒಂದು ಸುಳ್ಳು ಕಾರಣವನ್ನು ಹೇಳಿಕೊಂಡು ಪಾಟಿ ಸವಾಲಿಗೂ ಹಾಜರಾಗದೇ , ಮುಂದುವರೆದ ವಿಚಾರಣೆಯನ್ನು ಸಹ ನಡೆಸದೇ ಹಾಗೂ ತಾನೇ ಸ್ವಂತವಾಗಿ ದಾವೆಯನ್ನು ನಡೆಸುತ್ತೇನೆಂದು ಹೇಳಿ ಈ ಅರ್ಜಿಯನ್ನು ಸಲ್ಲಿಸಿರುವುದು ಕಾನೂನಿನಡಿಯಲ್ಲಿ ಊರ್ಜಿತವಾಗತಕ್ಕದಲ್ಲ. ದಾವಾ ಐಟಂ 3 ರ ಸ್ವತ್ತಿನ ಡೋರ್ ನಂ. 68/1888/1 ರ ವಿಸ್ತೀರ್ಣ ಪೂರ್ವ ಪಶ್ಚಿಮ 20 ಅಡಿ , ಉತ್ತರ ದಕ್ಷಿಣ 70 ಅಡಿ ಹಾಗೂ ಇದರಲ್ಲಿ ಕಟ್ಟಿರುವ ಪೂರ್ವ ಪಶ್ಚಿಮ 17 ಅಡಿ, ಉತ್ತರ ದಕ್ಷಿಣ 19 ಅಡಿ, ಅಳತೆಯ ಎಸಿ ಶೀಟಿನ ಮನೆ ಹಾಗೂ ಖಾಲಿ ನಿವೇಶನವನ್ನು ದಿ ಃ 30.11.2010 ರಂದು ಮಾಲೀಕರಾಗಿದ್ದಂತಹ 2 ನೇ ಪ್ರತಿವಾದಿಯಿಂದ ನೊಂದಣಿ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ. ನಂತರ ಸದರಿ ಸ್ವತ್ತು ಈ ಪ್ರತಿವಾದಿ ಹೆಸರಿಗೆ ಸಂಬಂಧಪಟ್ಟಂತಹ ನಗರಸಭೆಯಲ್ಲಿ ಖಾತಾ ನಡವಳಿಕೆಗಳು ಜರುಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಕಂದಾಯ ಸಹ ಪಾವತಿಸುತ್ತಾ ಬಂದಿದ್ದು ಈ ಪ್ರತಿವಾದಿಯೇ ಮೇಲ್ಕಂಡ ಡೋರ್ ನಂಬರಿನ ಸ್ವತ್ತಿನ ಸ್ವಾಧೀನದಾರರಾಗಿ, ಹಕ್ಕುದಾರರಾಗಿ, ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. ಈ ಪ್ರತಿವಾದಿಯು ಕ್ರಯಕ್ಕೆ ಪಡೆದ ಸ್ವತ್ತಿಗೆ ಸಂಬಂಧಿಸಿದಂತೆ ದಿ ಃ 25.06.2014 ರಂದು ಸಂಬಂಧಪಟ್ಟಂತಹ ಚನ್ನಪಟ್ಟಣ ನಗರಸಭೆ ಕಾರ್ಯಾಲಯದಲ್ಲಿ

ಮನೆ ಕಟ್ಟಲು ಪರವಾನಿಗೆಯನ್ನು ಪಡೆದು ಖರೀದಿಸಿದಂತಹ ಸ್ವತ್ತಿನಲ್ಲಿ ಆರ್ ಸಿ ಸಿ ಕಟ್ಟಡವನ್ನು ಕಟ್ಟಿ ಸದರಿ ಮನೆಯಲ್ಲಿ ಈ ಪ್ರತಿವಾದಿಯು ಕುಟುಂಬ ಸಮೇತರಾಗಿ ವಾಸ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

5. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃಅಂಶಗಳುಃ**

1. ಮಧ್ಯಂತರ ಅರ್ಜಿ ಪುರಸ್ಕಾರಗೊಳ್ಳಲು ಯೋಗ್ಯವಾಗಿದೆಯೇ?

2. ಮಾಡುವ ಆದೇಶ ಏನು?

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ 1 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ 2 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,

**ಕಾರಣಗಳು**

7. ಅಂಶ ಸಂಖ್ಯೆಃ1ಃ ವಾದಿಗಳು ಪ್ರತಿವಾದಿಗಳ ವಿರುದ್ದ ಈ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯರು ಈ ದಾವೆಯು ತಮ್ಮ ಸಾಕ್ಷ್ಯ ವಿಚಾರಣೆಗೆ ಇದ್ದ ಸಮಯದಲ್ಲಿ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಮಧ್ಯಂತರ ಅರ್ಜಿಯಲ್ಲಿ ವಾದಿಯು ತಂದೆಯ ಒಟ್ಟು ಕುಟುಂಬದ ಆಸ್ತಿಯನ್ನು ಒಂದನೇ ನಾಲ್ಕು ಭಾಗವನ್ನು ಕೋರಿ ಭಾಗ ಕೇಳಿದ್ದು ನಿಜ, ಆದರೆ ದಾಖಲೆಗಳನ್ನು ಹುಡುಕುತ್ತಾ ಹೋದಂತೆಲ್ಲಾ ಸತ್ಯದ ವಿಚಾರವು ದಾಖಲೆ ಸಮೇತ ತಿಳಿಯಿತ್ತು. ಈಗ ವಾದಪತ್ರದ ತಿದ್ದುಪಡಿಯ ಅವಶ್ಯಕತೆಯಿದ್ದು ಕೆಳಗಿನಂತೆ ಸದರಿ ನಾಲ್ಕು ಷೆಡ್ಯೂಲ್ ಸ್ವತ್ತುಗಳನ್ನು ಚೆಕ್ಕುಬಂದಿಗಳನ್ನು ಸೇರಿದಂತೆ ಪ್ರತ್ಯೇಕವಾಗಿ ಸಿದ್ದಯ್ಯನವರು ಬದುಕಿದಾಗಲೇ ದೇವೀರಮ್ಮಳಿಗೆ ಸಿದ್ದರಾಜೇಗೌಡನಿಗೂ ಬರೆದು ನೀಡಿದ್ದು ತಂದೆ ಸತ್ತ ನಂತರ ವರ್ಗಾಯಿಸಿಕೊಂಡು ಸ್ವಾಧೀನಾನುಭವದಲ್ಲಿರತಕ್ಕದ್ದು ಆಗಿದ್ದು ಈ ಸತ್ಯವನ್ನು ವಾದಿಗೆ ಮರೆ ಮಾಚಿ ಜಯಮ್ಮನವರು ಮತ್ತು ಪ್ರತಿವಾದಿ ಮಕ್ಕಳುಗಳು ದಿಃ 09.02.2004, 17.05.2007, 20.06.2011 ಮತ್ತು 05.05.2012, 30.11.2020 ರಂದು ಮಾಡಿರುವ ಕ್ರಯಪತ್ರ, ದಾನಪತ್ರ, ಮತ್ತು 02.04.2001 ರಂದು ಒಪ್ಪಿಗೆ ಪತ್ರ ಮಾಡಿದ್ದು ಮತ್ತು ದಿಃ 31.10.2000 ರಂದು ನೊಂದಣಿ ಮರಣ ಶಾಸನ ಪತ್ರ

ಮತ್ತು 13.02.2000 ರಂದು ನೊಂದಣಿಯಿಲ್ಲದ ದಾನಪತ್ರಗಳ ಮೂಲಕ ನನ್ನ 2 ನೇ ತಂಗಿಯಾದ ಹೇಮಾವತಿಗೂ ಮತ್ತು 4 ರಿಂದ 6 ನೇ ಪ್ರತಿವಾದಿಗಳಿಗೆ ಪರಭಾರೆ ಮಾಡಿರುವ ಕ್ರಯಪತ್ರಗಳು ವಾದಿಯ ಹಕ್ಕಿಗೆ ಬಾಧಕವಾಗುವುದಿಲ್ಲ ಮತ್ತು ವಾದಪತ್ರದಲ್ಲಿ ಕಣ್ಣು ತಪ್ಪಿನಿಂದ ಹಾಗೂ ಮಾಹಿತಿ ಕೊರತೆಯಿಂದ ಕೆಲವು ಮುಖ್ಯ ಅಂಶಗಳನ್ನು ಕೈ ಬಿಟ್ಟಿದ್ದು ಈ ಎಲ್ಲಾ ಅಂಶಗಳನ್ನು ಈ ಕೆಳಗಿನಂತೆ ವಾದಪತ್ರದ ವಿವರಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಕಂಡು ಬಂದಿದ್ದು ಈ ಅರ್ಜಿಯಲ್ಲಿ ಹೇಳಿರುವಂತೆ ತಿದ್ದುಪಡಿ ಮಾಡದೇ ಹೋದ ಪಕ್ಷದಲ್ಲಿ ಕ್ರಯದಾರರು ಬೇರೆಯವರಿಗೆ ಮಾರಾಟ ಮಾಡುವ ಸಂಭವವಿರುತ್ತದೆ. ಆ ಕಾರಣದಿಂದಲೂ ವಾದಪತ್ರದ ತಿದ್ದುಪಡಿ ಅವಶ್ಯಕವಾಗಿರುತ್ತದೆ. ಸದರಿ ತಿದ್ದುಪಡಿ ಮಾಡದಿದ್ದರೆ ದಾವಾದ ಸ್ವಾಭಾವಿಕತೆ ಮತ್ತು ವ್ಯಾಜ್ಯ ಕಾರಣ ಬದಲಾಗುವುದಿಲ್ಲ. ಆದ್ದರಿಂದ ವಾದ ಪತ್ರವನ್ನು ತಿದ್ದುಪಡಿ ಮಾಡಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ. ಪ್ರತಿವಾದಿಯರು ಸದರಿ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿ, ಈ ಅರ್ಜಿಯು ಊರ್ಜಿತವಾಗಿಲ್ಲದೇ ಇರುವ ಕಾರಣ ವಜಾಗೊಳಿಸಬೇಕೆಂದು ಕೋರಿರುತ್ತಾರೆ.

8. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದಿಯು ಹಂತ ಹಂತವಾಗಿ ದಾವೆಯನ್ನು ಮುಂದೂಡಿ ವಿವಾದಾಂಶಗಳು ಜರುಗಿ ವಾದಿಯ ವಿಚಾರಣೆಗೆಂದು ದಿಃ 03.01.2018 ಕ್ಕೆ ಮುಂದೂಡಲ್ಪಟ್ಟಿರುತ್ತದೆ. ತದನಂತರ ವಾದಿಯ ಮುಂದುವರೆದ ವಿಚಾರಣೆ ಇಲ್ಲವೆಂದು ಪರಿಗಣಿಸಿ ವಾದಿಯ ಪಾಟಿ ಸವಾಲಿಗೆಂದು ಮುಂದೂಡಲ್ಪಟ್ಟಿರುತ್ತದೆ. ನಂತರ ವಾದಿಯು ನ್ಯಾಯಾಲಯಕ್ಕೆ ಹಲವು ಬಾರಿ ಗೈರುಹಾಜರಾಗಿ ದಿಃ 15.10.2019 ರಂದು ಆದೇಶ 1 ನಿಯಮ 10 ರಡಿಯಲ್ಲಿ ಹೆಚ್ಚುವರಿ ಪ್ರತಿವಾದಿಗಳನ್ನಾಗಿ ಮದ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯು ಪುರಸ್ಕೃತಗೊಂಡ ನಂತರ ವಾದಿಯು ಆದೇಶ 6 ನಿಯಮ 17 ರ ಮದ್ಯಕಾಲೀನ ಅರ್ಜಿಯನ್ನು ಈ ಪ್ರತಿವಾದಿಯ ವಿರುದ್ಧ ಉದ್ದೇಶಪೂರ್ವಕವಾಗಿ ಸಲ್ಲಿಸಿರುತ್ತಾರೆ. ದಾವಾ ಐಟಂ 3 ರ ಸ್ವತ್ತಿನ ಡೋರ್ ನಂ. 68/1888/1 ರ ವಿಸ್ತೀರ್ಣ ಪೂರ್ವ ಪಶ್ಚಿಮ 20 ಅಡಿ , ಉತ್ತರ ದಕ್ಷಿಣ 70 ಅಡಿ ಹಾಗುಾ ಇದರಲ್ಲಿ ಕಟ್ಟಿರುವ ಪೂರ್ವ ಪಶ್ಚಿಮ 17 ಅಡಿ, ಉತ್ತರ ದಕ್ಷಿಣ 19 ಅಡಿ, ಅಳತೆಯ ಎಸಿ ಶೀಟಿನ ಮನೆ ಹಾಗೂ ಖಾಲಿ ನಿವೇಶನವನ್ನು ದಿಃ 30.11.2010 ರಂದು ಮಾಲೀಕರಾಗಿದ್ದಂತಹ 2 ನೇ ಪ್ರತಿವಾದಿಯಿಂದ ನೊಂದಣಿ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ. ನಂತರ ಸದರಿ ಸ್ವತ್ತು ಈ ಪ್ರತಿವಾದಿ ಹೆಸರಿಗೆ ಸಂಬಂಧಪಟ್ಟಂತಹ ನಗರಸಭೆಯಲ್ಲಿ ಖಾತಾ ನಡವಳಿಕೆಗಳು ಜರುಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಕಂದಾಯ ಸಹ ಪಾವತಿಸುತ್ತಾ ಬಂದಿದ್ದು ಈ ಪ್ರತಿವಾದಿಯೇ ಮೇಲ್ಕಂಡ ಡೋರ್ ನಂಬರಿನ ಸ್ವತ್ತಿನ

ಸ್ವಾಧೀನದಾರರಾಗಿ, ಹಕ್ಕುದಾರರಾಗಿ, ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆ. ಈ ಪ್ರತಿವಾದಿಯು ಕ್ರಯಕ್ಕೆ ಪಡೆದ ಸ್ವತ್ತಿಗೆ ಸಂಬಂಧಿಸಿದಂತೆ ದಿ ಃ 25.06.2014 ರಂದು ಸಂಬಂಧಪಟ್ಟಂತಹ ಚನ್ನಪಟ್ಟಣ ನಗರಸಭೆ ಕಾರ್ಯಾಲಯದಲ್ಲಿ ಮನೆ ಕಟ್ಟಲು ಪರವಾನಿಗೆಯನ್ನು ಪಡೆದು ಖರೀದಿಸಿದಂತಹ ಸ್ವತ್ತಿನಲ್ಲಿ ಆರ್ ಸಿ ಸಿ ಕಟ್ಟಡವನ್ನು ಕಟ್ಟಿ ಸದರಿ ಮನೆಯಲ್ಲಿ ಈ ಪ್ರತಿವಾದಿಯು ಕುಟುಂಬ ಸಮೇತರಾಗಿ ವಾಸ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ ಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

9. ಈ ದಾವೆಯಲ್ಲಿ ಪಕ್ಷಗಾರರ ವಿಚಾರಣೆಯು ಪ್ರಾರಂಭವಾಗಿದ್ದು, ಪ್ರಸ್ತಾಪಿತ ತಿದ್ದುಪಡಿಯು ಮೂಲ ವಾದಪತ್ರದ ಎಲ್ಲಾ ಅಂಶಗಳಲ್ಲಿಯೂ ತಿದ್ದುಪಡಿ ಮಾಡಲು ಕೋರಿದ್ದು , ಅದೇರೀತಿ ದಾವೆಯ ಸ್ವರೂಪವೇ ಬದಲಾಗುವ ಕಾರಣ ಪ್ರಸ್ತಾಪಿತ ತಿದ್ದುಪಡಿಯಿಂದ ಪ್ರತಿವಾದಿಗಳ ಪ್ರತಿರಕ್ಷೆಗೆ ದಕ್ಕೆಯಾಗುವುದರಿಂದ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿಯನ್ನು ಪುರಸ್ಕಾರಗೊಳ್ಳಲು ಯೋಗ್ಯವಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು ಅಂಶ ಸಂಖ್ಯೆಃ**1** ನ್ನು ನಕಾರಾತ್ಮಕವಾಗಿ ಉತ್ತರಿಸಿದೆ.

10. <u>ಅಂಶ ಸಂಖ್ಯೆಃ**2**ಃ-</u> ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **6** ನಿಯಮ **17** ಸಹವಾಚಕ ಕಲಂ.**151** ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ರೂ.**1000/-** ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

(ಬೆರಳಚ್ಚು ನಕಲುಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2022** ನೇ ಇಸವಿ ನವೆಂಬರ್ **9** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

(ಉಷಾರಾಣಿ ಬಿ.ಎನ್.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್. ಸಿ., ಚನ್ನಪಟ್ಟಣ.

ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ

(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)

ಆದೇಶ

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **6** ನಿಯಮ **17** ಸಹವಾಚಕ ಕಲಂ**.151** ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ರೂ**.1000/-** ಗಳ ಖರ್ಚಿನೊಂದಿಗೆ ವಜಾಗೊಳಿಸಲಾಗಿದೆ.

**For steps.**
**Call on 05.12.2022.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್. ಸಿ., ಚನ್ನಪಟ್ಟಣ.